122 (2)

Regd No BG 155

Sri "SATYAVADI"
— DAILY —
MYSORE 4
46 th Year

Protect the cow

— ೫೧ —

ಸತ್ಯವಾದಿ
SATYAVADI

ಸ್ಥಾಪಕರು— ಅರಮನೆ ಸಿಂಸ್ಥೇದಾರ್ ಎಂ. ವಿ. ಸುಬ್ಬರಾಯುರು [ಬಿಡಿ ಪ್ರತಿ 3 ಪೈ

24—3—1962

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

ಗೋಸಂರಕ್ಷಣೆ ಮಾಡಿ

ಪ್ರಮುಖ ವೃತ್ತಾಂತಗಳು

★

ಸರಕಾರ ದಂಗೆಕೋರ ಫಿಜೋ ಭಾರತಕ್ಕೆ ಮರಳಿ ಬರಲು ಬಯಸಿರುವ ವಿಷಯವಾಗಿ ಲೋಕಸಭೆಯಲ್ಲಿ ಪ್ರಶ್ನೋತ್ತರಗಳಾದವು.

ಅಂತರಿಕ್ಷ ಸಂಶೋಧನ ಬಗೆಗೆ ರಷ್ಯಾ ಮತ್ತು ಅಮೇರಿಕಾ ಒಪ್ಪಂದವಾಗಿರುವುದಕ್ಕೆ ವಿಶ್ವಸಂಸ್ಥೆ ಪ್ರಧಾನ ಕಾರ್ಯದರ್ಶಿಗಳು ಸಂತೋಷ ಪಟ್ಟಿರುವರು.

ಇಸ್ಲಾಂ ಅನುಷ್ಠಾನವೇ ಪಾಕಿಸ್ತಾನದ ಪ್ರಥಮ ಗುರಿ ಎಂದು ಪಾಕಿಸ್ತಾನದ ಅಧ್ಯಕ್ಷ ಅಯೂಬ್ ರಾವಲ್ಪಿಂಡಿಯಲ್ಲಿ ಹೇಳಿದರು.

ಮುಂಬಯಿನ ಬ್ಲಿಟ್ಸ್ ಪತ್ರಿಕೆ ಸುದ್ದಿಗಾರ ಶ್ರೀ ರಾಘವ್ ಸಲ್ಲಿಸಿದ ತಪ್ಪೊಪ್ಪಿಗೆ ಪತ್ರವನ್ನು ಲೋಕಸಭೆಯಲ್ಲಿ ಅಂಗೀಕರಿಸಲಾಯಿತು.

ಟಿಬೆಟ್ಟಿನ ಧರ್ಮಗುರು 26 ವರ್ಷದ ದಲಾಯ್‌ಲಾಮಾ ತಮ್ಮ ಆತ್ಮಕಥೆ ಬರೆಯುತ್ತಿರುವರೆಂದೂ, ಜೂನ್ ತಿಂಗಳಲ್ಲಿ ಲಂಡನ್ ಮತ್ತು ನ್ಯೂಯಾರ್ಕುಗಳಲ್ಲಿ ಪ್ರಕಟವಾಗುವುದೆಂದೂ ವಂದಿಯಾಗಿದೆ.

ಮೈಸೂರು ರಾಜ್ಯದ ಸಂಖ್ಯಾಬಲವೆಷ್ಟೆಂಬುದನ್ನು ನಿರ್ದಿಷ್ಟವಾಗಿ ಸಭೆಗೆ ತಿಳಿಸಬೇಕೆಂದು ವಿರೋಧಪಕ್ಷದ ನಾಯಕ ಶ್ರೀ ಶಿವಪ್ಪನವರು ನಿನ್ನೆ ಬೆಂಗಳೂರಿನಲ್ಲಿ ಶಾಸನ ಸಭೆಯಲ್ಲಿ ಮುಖ್ಯಮಂತ್ರಿಗಳನ್ನು ಒತ್ತಾಯಮಾಡಿದರು.

ಕಾಶ್ಮೀರದ ಯುದ್ಧಸ್ಥಿರಭ ರೇಖೆಯ ಆಧಾರದ ಮೇಲೆ ಭಾರತ-ಪಾಕಿಸ್ತಾನ ನಡುವೆ ಶಾಂತಿಸ್ಥಾಪನೆ ನಡೆಸಬೇಕೆಂಬ ಪ್ರಸ್ತಾವನೆಯನ್ನು ಪಾಕಿಸ್ತಾನ ಅಧ್ಯಕ್ಷ ಅಯೂಬರು ನಿರಾಕರಿಸಿರುವರೆಂದು ರಾವಲ್ಪಿಂಡಿಯ ವಾರ್ತೆ.

ಕೊಟ್ಟೂರಿನ ಕೊಟ್ಟೂರೇಶ್ವರಸ್ವಾಮಿಯು 18 ತೊಲಾ ಬಂಗಾರದ ಕಿರೀಟ ಪತ್ತೆಯಿಲ್ಲವೆಂದೂ, ಪೋಲೀಸರು ಅರ್ಚಕನನ್ನು ಬಂಧಿಸಿ ತನಿಖೆ ನಡೆಸುತ್ತಿರುವರೆಂದೂ ವಂದಿಯಾಗಿದೆ.

ಅನಂದಪುರ ಹೋಬಳಿ ಬೈರಾಪುರ ಗ್ರಾಮದಲ್ಲಿ ಕಳೆದವಾರ 5 ಮನೆಗಳಿಗೆ ಬೆಂಕಿ ತಗಲಿ ಸುಟ್ಟು ಬೂದಿಯಾದವು ; 2 ಲಕ್ಷ ರೂಗಳ ಹಣಕಾಸು ಆಸ್ತಿ ನಷ್ಟವಾಗಿದೆ — ಒಂದು ಮನೆಯಲ್ಲಿ ಜವಾನು ಮುಳುಗಡೆ ಪರಿಹಾರವಾಗಿ ಬಂದಿದ್ದ 42 ಸಾವಿರ ರೂಗಳ ನೋಟಿನ ಕಟ್ಟುಗಳೂ ಸುಟ್ಟು ಬೂದಿಯಾದವು

ನವದೆಹಲಿ ವಾರ್ತೆಯಂತೆ, ಮಾಸ್ಕೋದ ತಾರಾಸಿಂಗರು ಹತ್ತು ಮಂದಿ ನಿಯೋಗದೊಂದಿಗೆ ರಾಷ್ಟ್ರಾಧ್ಯಕ್ಷ ಡಾ|| ಪ್ರಸಾದ್‌ರನ್ನು ಭೇಟಿಮಾಡಿ, ಪಂಜಾಬು ಮುಖ್ಯ ಮಂತ್ರಿ ಶ್ರೀ ಕೈರಾನರ ಚುನಾವಣಾ ಕಾಲದಲ್ಲಿ ಅಪ್ರಮಾಣಿಕ ವಿಧಾನವನ್ನು ಅನುಸರಿಸಿದ ಬಗ್ಗೆ ತನಿಖೆ ನಡೆಸಲು ಒತ್ತಾಯಮಾಡಿದರು.

ತುಮಕೂರಿನಲ್ಲಿ ಒಂದು ಹೆರಿಗೆ ಪ್ರಸಂಗದಲ್ಲಿ ಅಲಿಸ ಜನರಲ್ ಆಸ್ಪತ್ರೆಯಲ್ಲಿ ಸಮರ್ಪಕ ಚಿಕಿತ್ಸೆ ದೊರೆಯದಿದ್ದರಿಂದ ಬೆಂಗಳೂರಿನಿಂದ ಮೂರು ಮಂತ್ರಿ ವೈದ್ಯರು ಹೋಗಿ ಶಸ್ತ್ರಚಿಕಿತ್ಸೆ ನಡೆಸಿ ಸತ್ತಿದ್ದ ಮಗುವನ್ನು ತೆಗೆದರಿಂದು ತಿಳಿಯುಬಂದಿದೆ

೫೦೦೦

ಮೈಸೂರಿನ ಮುಂದಿನ ಗೌರ್ನರ್

ಮಹಾರಾಜ ಶ್ರೀ ಜಯಚಾಮರಾಜ ಒಡೆಯರ್

ರವರೇ ಇರಲಿ

ಸೆಕ್ಷನ್ 144

ಹೈದರಾಬಾದು 23— ಕೊಥಗುಡಿ ಯುವಕ್ತರಲ್ಲಿ ಗುರುವಾರ ನಡೆದ ಘರ್ಷಣೆ ಮತ್ತು ಪೋಲೀಸು ಗೋಳೀಬಾರುಗಳಿಂದ 5 ಮಂದಿ ಸತ್ತು 80 ಮಂದಿ ಗಾಯಗೊಂಡಿರುವುದಾಗಿ ಪ್ರಕಟವಾಗಿದೆ — ಪಟ್ಟಣದಲ್ಲಿ 144 ನೇ ಸೆಕ್ಷನ್ ಪ್ರತಿಬಂಧಕಾಜ್ಞೆ ಜಾರಿಮಾಡಲಾಗಿದೆ.

ಶಕ್ತಿ ಕುಂದಿದೆ

ನಾಗಾ ದೌರ್ಜನ್ಯಕಾರಿಗಳ ಶಕ್ತಿ ಈಗ ಕುಂದಿದೆ ಎಂದು ನೆಹರೂರವರು ಲೋಕಸಭೆಯಲ್ಲಿ ತಿಳಿಸಿದರು.

ಬಂಗಾರದ ತಪ್ಪು

ಪಂಜಿಂ— ಗೋವಾದಲ್ಲಿರುವವರು ತಮ್ಮಲ್ಲಿರುವ ವಿದೇಶಿ ಗುರುತಿನ ಭಂಗಾರವನ್ನು ಡಿಕ್ಲೇರು ಮಾಡುವಂತೆ ತಿಳಿಸಲಾಗಿದೆ.

ತೆರಿಗೆ ಬಗ್ಗೆ ಖಂಡನೆ

ಹೈದರಾಬಾದು 22— ಬಡ್ಜೆಟ್ಟಿನಲ್ಲಿ ಹೊಸ ತೆರಿಗೆ ಹಾಕುವ ಸೂಚನೆಯನ್ನು ವಿರೋಧ ಪಕ್ಷದವರು ಕಟುವಾಗಿ ಖಂಡಿಸಿದರು

ರಾಮಾಯಣ ಸಾಮತಿ

ಬೆಂಗಳೂರು 23— ಶಾಸನಸಭೆಯಲ್ಲಿ— ಶಾಸನಸಭೆ ನಾಯಕತ್ವ ಪಡೆಯಲು ಶ್ರೀ ನಿಜಲಿಂಗಪ್ಪನವರೇ ಬರುತ್ತಾರೆಂಬ ನಂಬಿಕೆಯನ್ನು ಪ್ರತಿಧ್ವನಿಸುತ್ತಾ— ರಾಮನು ವನವಾಸಕ್ಕೆ ಹೋಗಿರುತ್ತಾನೆ, ಭರತ ಈಗ ರಾಜ್ಯವಾಳುತ್ತಿದ್ದಾನೆ, ನಾವು ರಾಮನು ವಾಪಸು ಬರುವುದನ್ನು ಕಾಯುತ್ತಿದ್ದೇವೆ ಶ್ರೀ ಮುಕ್ಕಣ್ಣಪ್ಪನವರು ಸುಡಿದರು

ಬೆಂಗಳೂರು 23— ಮೈಸೂರಿನ ಈಗಿನ ರಾಜ್ಯಪಾಲರಾದ ಶ್ರೀ ಜಯಚಾಮರಾಜ ಒಡೆಯರವರೇ ಇನ್ನೊಂದು ಅವಧಿಗೂ ಮುಂದುವರಿಯಬೇಕೆಂದು ಪ್ರಮುಖರೆನೇಕರ ಅಕಾಂಕ್ಷೆಯಾಗಿರುವುದಾಗಿ ತಿಳಿಯುಬಂದಿದೆ — ಗೌರ್ನರವರ ಅವಧಿ ಮುಂದಿನ ತಿಂಗಳು ಮಧ್ಯಕ್ಕೆ ಮುಗಿಯುತ್ತದೆ — ಇವರೇ ಇನ್ನೊಂದು ಅವಧಿಗಿಂದೇಕೆಂದು ಜಿತ್ತಿ ಮಂತ್ರಿಮಂಡಲ ತೀರ್ಮಾನ ಮಾಡಿದ್ದಿತೆಂದು ಗೊತ್ತಾಗಿದೆ — ಗೌರ್ನರು ಈಗ ದೆಹಲಿಯಲ್ಲಿದ್ದಾರೆ — ಈ ವಿಚಾರದಲ್ಲಿ ಭಾರತ ಸರಕಾರದ ನಿರ್ಧಾರವು ಫೆಬ್ರವರಿಯಲ್ಲೇ ನಿರೀಕ್ಷೆಸಬಹುದಾಗಿದೆ.

★

ಹೈಕಮ್ಯಾಂಡಿನೊಡನೆ ಮಾತುಕತೆ

ಬೆಂಗಳೂರು 23— ಮುಖ್ಯಮಂತ್ರಿ ಶ್ರೀ ಕಂಠಿಯವರು ಕೇಂದ್ರಾಯ ಮಂತ್ರಿ ಶ್ರೀ ಕೃಷ್ಣಪ್ಪನವರೊಡನೆ ಶನಿವಾರ ಮಧ್ಯಾಹ್ನ ದೆಹಲಿಗೆ ಪ್ರಯಾಣ ಮಾಡುವರೆಂದೂ, ಹೈಕಮ್ಯಾಂಡು ಶ್ರೀ ಜಿತ್ತಿ ಮತ್ತು ಶ್ರೀ ಕಡಿದಾಳ್ ಮಂಜಪ್ಪನವರನ್ನು ಮಂತ್ರಿಮಂಡಲಕ್ಕೆ ಸೇರಿಸುವಂತೆ ಸೂಚಿಸಿರುವುದನ್ನು ಚರ್ಚಿಸುವರೆಂದೂ ಮಂತ್ರಿಮಂಡಲದಲ್ಲಿನ ನೇಮಕಕ್ಕೆ ನಾಯಕರಿಗೆ ಸ್ವಾತಂತ್ರ್ಯವಿರಬೇಕೆಂದು ತಿಳಿಸುವರೆಂದೂ ಗೊತ್ತಾಗಿದೆ

★

ನಾಳೆಯ ಪಂಚಾಂಗ

ಅಸ್ಥಾನ ಮಹಾವಿದ್ವಾನ್ ಧರ್ಮಾಧಿಕಾರಿ
ದೈವಜ್ಞಶಿಖಾಮಣಿ
ಸಂಪತ್ಕುಮಾರ ಜೋಯಿಸರಿಂದ

25 ಭಾನುವಾರ ಚಾತಿ ವಿಶಾಖ

ಶ್ರೀ ಶಾರದಾ ಮಾತೆಯವರ ಕೆಲವು ಜೀವನ ಸ್ಮರಣೆಗಳು

(ಮುಂದುವರಿದುದು)

ದಕ್ಷಿಣೇಶ್ವರದ ಗಾಯನಶಾಲೆಯಲ್ಲಿ ಮಾತೆಯವರಿದ್ದಾಗ, ಅವರು ತಾವೇ ಅಡಿಗೆ ಮಾಡಿ ನಿತ್ಯವೂ ಊಟವನ್ನು ಶ್ರೀ ರಾಮಕೃಷ್ಣರ ಕೋಣೆಗೆ ತೆಗೆದುಕೊಂಡು ಹೋಗಿ ಬಡಿಸುತ್ತಿದ್ದರು ; ಒಂದು ದಿನ ಅವರು ಊಟ ತೆದುಕೊಂಡು ಹೊಂಟಾಗ, ಕೆಲಸ ಮಾಡುವ ಭಕ್ತಳೊಬ್ಬಳು ಅಡ್ಡಗಟ್ಟಿ ' ಲ್ಲಮ್ಮಾ, ಸಾಂಸ್ ಊಟ ತೆಗೆದುಕೊಂಡು ಹೋಗಲೇ ? ' ಎಂದು ಕೇಳಿದಾಗ ಮಾತೆ ಅವಳ ಕೈಗೆ ಬಟ್ಟಲನ್ನು ಕೊಟ್ಟರು ; ಅವಳು ಅದನ್ನು ಪರಮಹಂಸರ ಕೋಣೆಯಲ್ಲಿಟ್ಟು ಹೊರಟು ಬಂದಳು ; ಪರಮಹಂಸರು ಊಟ ಮಾಡುತ್ತಿದ್ದಾಗ ಮಾತೆಯವರು ಗಾಳಿ ಹಾಕುತ್ತಾ ಪ್ರೀತಿಯಿಂದ ಊಟಮಾಡಿ ಎಂದಾಗ ಅವರೊಮ್ಮೆ ' ನೋಡು, ಇನ್ನು ನೀನು ನನ್ನ ಊಟದ ಬಟ್ಟಲನ್ನು ಬೇರೆಯವರ ಕೈಗೆ ಕೊಡಬಾರದು: ನನಗೆ ಒಂದೇ ತುತ್ತು ಗಂಟಲಲ್ಲಿ ಇಳಿಯುವುದಿಲ್ಲ ; ಬೇರೆಯವರ ಸ್ಪರ್ಶದಿಂದ ಅದು ನನಗೆ ಸೇರುವುದಿಲ್ಲ ' : ಆಗ ಮಾತೆ ಎಂದರು ' ಇಂದು ಆಗಿಹೋಯಿತಲ್ಲ : ನಾಳೆಯಿಂದ ನಾನೇ ತರುತ್ತೇನೆ ; ಈಗ ಹೇಗಾದರೂ ಊಟಮಾಡಿ, ಸೇರುತ್ತದೆ ' ; ಆಗ ಪರಮಹಂಸರು ' ಹಾಗಾದರೆ ಮಾತು ಕೊಡು ; ಯಾಂಬಳಯವೂ ಇನ್ನು ಅಡಿಗೆ ಕಳಿಸುವುದಿಲ್ಲವೆಂದು ' ಎಂದಾಗ ಮಾತೆ ಗಾಳಿ ಬೀಸುವುದನ್ನು ನಿಲ್ಲಿಸಿ ಬೀಸಣಿಗೆಯನ್ನು ಒತ್ತಟ್ಟಿಗಿಟ್ಟು ಕೈಮುಗಿದು ಹೇಳಿದರು ' ಇನ್ನು ಮುಂದೆ ನಾನೇ ತರುವುದಕ್ಕೆ ಎಚ್ಚರಿಕೆ ವಹಿಸುತ್ತೇನೆ : ಅದರೆ ಯಾವಾಗಲಾದರೊಮ್ಮೆ ಯಾರಾದರೂ ಬಂದು ' ಅಮ್ಮಾ, ನಾನು ಕೊಂಡುಹೋಗಲೇ ' ಎಂದು ಅಂಗಲಾಚಿದಾಗ ನೀನು ಇಲ್ಲವೆನ್ನಲಾರೆ : ನೀವು ನನ್ನ ತಾಳೂರು ಮಾತ್ರವಲ್ಲ : ಎಲ್ಲರಿಗೂ ಸೇರಿದವರು ' ಎಂದರು.

೦೦೦೦

ಶ್ರೀ ರಾಮಕೃಷ್ಣ ಪರಮಹಂಸರು ಶಿಷ್ಯನನ್ನು ಮಮತೆಯಿಂದ ಕಾಣುತ್ತಿದ್ದರು : ಅವರ ಆರೋಗ್ಯದ ಕುರಿತಾಗಿಯೂ ಆಹಾರ ವಿಹಿಯ ಕುರಿತಾಗಿಯೂ ಸಾಧನೆಗೆ ಪ್ರತಿಕೂಲವಾಗದಂತೆ ಎಚ್ಚರ ವಹಿಸುತ್ತಿದ್ದರು. ಒಮ್ಮೆ ಅವರು ಭಾಬರಾಮನಿಗೆ ' ನೀನು ಎಷ್ಟು ಚಪಾತಿ ತಿಂದೆ ' ಎಂದು ಕೇಳಿದರು ; ಆಗ ಅವನು ' ಆರು ' ಎಂದನು ; ಷ್ಟು ಯಾಕೆ ತಿಂದೆ. ಎಂದು ಕೇಳಿದಾಗ, ಮಾತೆಯವರು ಬಡಿಸಿದರು, ನಾನು ತಿಂದೆ, ಎಂದು ಶಿಷ್ಯನಂದನು ಅಷ್ಟರಲ್ಲಿ ಮಾತೆಯವರು ಅಲ್ಲಿಗೆ ಬಂದರು ; ಒಡನೆಯೇ ಶ್ರೀ ರಾಮಕೃಷ್ಣರು ಮಾತೆಯನ್ನು ಕುರಿತು, ನೀನು ಈ ಮಕ್ಕಳ ಆರೋಗ್ಯ ಕೆಡಿಸುತ್ತಿ, ಅವರ ಸಾಧನೆಗೂ ಅಡಚಣೆ ಮಾಡುತ್ತಿ. ಏಕೆ ಅವನಿಗೆ ಆರು ಚಪಾತಿ ಬಡಿಸಿದೆ, ಎಂದು ಬಿರುಸಿನಿಂದ ಕೇಳಿದಾಗ, ಮಾತೆಯವರು ಸವಾಧಾನವಾಗಿಯೇ ಹೇಳಿದರು– ಎರಡು ಚಪಾತಿ ಹೆಚ್ಚಾಗಿ ತಿಂದುದರಿಂದ ವಿನಾಯಿತಂತೆ : ಅದರಿಂದ ಅವನ ಆರೋಗ್ಯ ಕೆಡಲಾರದು ; ಅದರ ಹೊಣೆಯನ್ನು ನಾನು ಹೊರುತ್ತೇನೆ, ಅದಕ ಯೋಚನೆ ನಿಮಗೆ ಬೇಡ, ಎಂದರು

SHAKTI SUDHA

A Superb Tonic

Edited, Printed & Published by the Proprietor, Dharma Prachara Nirata M. S. Krishna Rao, at the Satyavadi Press Chamarajapuram, Mysore 4.

ವುಡ್‌ಲ್ಯಾಂಡ್ಸ್ ವೈಭವ 7 ನೇ ವಾರ

ಜಂಗ್ಲಿ (ಹಿಂದಿ) Junglee

ನಟವರ್ಗ— ಶಮ್ಮಿ ಕಾಪೂರ್, ಸೈರಾ ಬಾನು, ಲಲಿತಾ ಪವಾರ್, ಹೆಲೆನ್

ಸಂಗೀತ– ಶಂಕರ್-ಜೈಕಿಶನ್ [ದಿನವಹಿ 3 ಪ್ರದರ್ಶನಗಳು]

ಆಪೆರಾ— 23–3–62 ರಿಂದ

ಶಾರದ (ತಮಿಳು) ಹೊಸ ಚಿತ್ರ

ಪಾತ್ರ— ಎಸ್ ವಿ ರಂಗರಾವ್, ಎಂ ಆರ್ ರಾಧ, ಎಸ್ ಎಸ್ ರಾಜೇಂದ್ರನ್

ಸಾರಂಗಪಾಣಿ, ಎಂ ವಿ ರಾಜಮ್ಮ ಸಂಧ್ಯ, ಮುತ್ತುಲಕ್ಷ್ಮಿ

ರಾಜಧಾನಿಯಲ್ಲಿ ಪ್ರಪ್ರಥಮ ಪ್ರದರ್ಶನ [ದಿನವಹಿ 3 ಆಟಗಳು]

Help The 'Gorakshana'

Advertise in Goraksana and help the pious cause

ಗೋರಕ್ಷಣ ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ

" ಗೋರಕ್ಷಣ " ಪತ್ರಿಕೆಗೆ ಬೆಂಬಲಿಗರಾಗಿರಿ

ಗೋರಕ್ಷಣೆ, ಪ್ರಾಣಿದಯೆ, ಪಶುವೈದ್ಯ, ಶಾಕಾಹಾರ ವಿಚಾರಗಳ ಪ್ರಚಾರದ ಏಕೈಕ ಕನ್ನಡ ಪತ್ರಿಕೆ.

ಗೋರಕ್ಷಣ ಪತ್ರಿಕೆಗೆ ಸಹಾಯಧನವನ್ನು ಮತ್ತು ಪ್ರಕಟಿಸಲು ಅನುಕೂಲವಾದ ಲೇಖನಗಳನ್ನೂ ವಾರ್ತೆಗಳನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ವಿಳಾಸ : ಗೋರಕ್ಷಣ ಆಫೀಸ್, ಚಾಮರಾಜಪುರಂ, ಮೈಸೂರು



— ORBIT COUCH